ಗಳೆಲ್ಲಾ ಉಪವಾಸ ಕುಳಿತಿದ್ದಾರೆ. ದಯವಿಟ್ಟು ಅದೊಂದನ್ನು ಮುಗಿಸಿ. ಬೆಳಗಾಂ ಜಿಲ್ಲೆಯ ಎಂ.ಎಲ್.ಎ ಗಳ ಮನೆ ಮುಂದೆ ಸತ್ಯಾಗ್ರಹ ಕುಳಿತಿದ್ದಾರೆ. ದಯವಿಟ್ಟು clarification ಕೊಟ್ಟರೆ ಒಳ್ಳೆಯದು.

(ಗೊಂದಲ)

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್ : ಪ್ರಶ್ನೋತ್ತರ ಸಮಯ ಮುಗಿಯಲಿ.

ಅಧ್ಯಕ್ಷರು : ಮಾನ್ಯ ಸಚಿವರು ನಮಾಜ್‌ಗೆ ಹೋಗಬೇಕಾಗಿರುವ ಕಾರಣ ಪ್ರಶ್ನೆ ಕೇಳಿ ಕಳುಹಿಸಿಬಿಡುತ್ತೇನೆ. ಮೋಹಿಯುದ್ದೀನ್ ಬಾವಾ..

208 ; ವೈದ್ಯಾಧಿಕಾರಿಗಳು ಇಲ್ಲದಿರುವುದು

ಶ್ರೀ ಮೋಹಿಯುದ್ದೀನ್ ಬಾವಾ ಬಿ.ಎ (ಮಂಗಳೂರು ನಗರ ಉತ್ತರ)

ಅ) ಸುರತ್ಕಲ್ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಕಳೆದ ಒಂದು ವರ್ಷದಿಂದ ವೈದ್ಯಾಧಿಕಾರಿಗಳಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ತ್ವರಿತವಾಗಿ ಈ ಆರೋಗ್ಯ ಕೇಂದ್ರಕ್ಕೆ ವೈದ್ಯಾಧಿಕಾರಿಗಳನ್ನು ನೇಮಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ;

ಇ) ಸುರತ್ಕಲ್ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸಮುದಾಯ ಆರೋಗ್ಯ ಕೇಂದ್ರವಾಗಿ ಮೇಲ್ದರ್ಜೆಗೇರಿಸಲು ಸರ್ಕಾರ ಕ್ರಮಕೈಗೊಳ್ಳುವುದೇ;

ಶ್ರೀ ಯು.ಟಿ.ಖಾದರ್(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಸುರತ್ಕಲ್ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಖಾಲಿ ಇದ್ದ ಹುದ್ದೆಯನ್ನು ಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಲು ಅರ್ಜಿಗಳನ್ನು ಆಹ್ವಾನಿಸಿ ದಿನಾಂಕ 16–09–2013ರಂದು ಡಾ: ಅನುಷಾ ಶೆಟ್ಟಿ ಅವರನ್ನು ನೇಮಿಸಲಾಗಿತ್ತು. ಸದರಿ ವೈದ್ಯರು ದಿನಾಂಕ 22–12–

2013ರಂದು ರಾಜೀನಾಮೆಯನ್ನು ನೀಡಿರುತ್ತಾರೆ. ಪುನಃ ಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಲು ಅರ್ಜಿಗಳನ್ನು ಆಹ್ವಾನಿಸಿ ದಿನಾಂಕ 12–3–2014ರಂದು ಡಾ: ರಶ್ಮಿ ಅವರನ್ನು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಲಾಗಿತ್ತು. ಈ ಹುದ್ದೆಗೆ ಒಬ್ಬ ಖಾಯಂ ವೈದ್ಯರು ಕೌನ್ಸಿಲಿಂಗ್‌ನಲ್ಲಿ ಸುರತ್ಕಲ್ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಸ್ಥಳ ಆಯ್ಕೆ ಮಾಡಿಕೊಂಡಿದ್ದು, ದಿನಾಂಕ 01–07–2014 ರಿಂದ ಕರ್ತವ್ಯಕ್ಕೆ ಹಾಜರಾಗಿರುತ್ತಾರೆ. ಈ ಹಿನ್ನೆಲೆಯಲ್ಲಿ ಸದರಿ ಗುತ್ತಿಗೆ ವೈದ್ಯರನ್ನು ಸರ್ಕಾರಿ ಸೇವೆಯಿಂದ ಬಿಡುಗಡೆಗೊಳಿಸಲಾಗಿದೆ.

ಇ) ಮಂಗಳೂರು ತಾಲ್ಲೂಕಿನ 2011ರ ಗ್ರಾಮೀಣ ಜನಸಂಖ್ಯೆ: 210033 ಇದ್ದು, ಈಗಾಗಲೇ 2 ಸಮುದಾಯ ಆರೋಗ್ಯ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿವೆ.

ಭಾರತ ಸರ್ಕಾರದ ಮಾರ್ಗಸೂಚಿಯ ಪ್ರಕಾರ ಒಂದು ಲಕ್ಷದಿಂದ ಒಂದು ಲಕ್ಷದ ಇಪ್ಪತ್ತು ಸಾವಿರ ಜನಸಂಖ್ಯೆಗೆ ಒಂದು ಸಮುದಾಯ ಆರೋಗ್ಯ ಕೇಂದ್ರ ಸ್ಥಾಪಿಸಲಾಗುತ್ತಿದೆ. ಆ ಮೇರೆಗೆ ಸುರತ್ಕಲ್ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸಮುದಾಯ ಆರೋಗ್ಯ ಕೇಂದ್ರವಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸದ್ಯಕ್ಕೆ ಇರುವುದಿಲ್ಲ.

ಶ್ರೀ ಬಿ.ಎ. ಮೋಹಿಯುದ್ದೀನ್ ಬಾವಾ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ನಮಗೆ ಕೌನ್ಸಿಲಿಂಗ್ ಮೂಲಕ ಖಾಯಂ ವೈದ್ಯರನ್ನು ಒಂದನೇ ತಾರೀಖಿನಿಂದ ಕೊಟ್ಟಿದ್ದಾರೆ, ಧನ್ಯವಾದಗಳು. ನಮ್ಮ ಸೂರತ್ಕಲ್ ವ್ಯವಸ್ಥೆ ಹೇಗಿದೆಯೆಂದರೆ, ಇವತ್ತು ಅದು industrial town ಆಗಿರುವುದರಿಂದ ಅಲ್ಲಿ MRPL, BSಈ ಅನೇಕ ಕಾರ್ಖಾನೆಗಳಿರುವ ಕಾರಣ ಅಲ್ಲಿ 100 ಬೆಡ್‌ಗಳ ಆಸ್ಪತ್ರೆಯನ್ನು ಕಟ್ಟುವುದಕ್ಕೆ ಅವಕಾಶ ಮಾಡಿಕೊಡಬೇಕು. ಅಲ್ಲಿ ಮೂರು ಎಕರೆ ಜಾಗವಿದೆ. ಈಗಾಗಲೇ ನಾನು ಮಾನ್ಯ ಆರೋಗ್ಯ ಮಂತ್ರಿಗಳನ್ನು ಕೇಳಿದ್ದೇನೆ. ಆ ಭಾಗದ MRPL ಮತ್ತು ಅವರ ಸಹಭಾಗಿತ್ವ ದೊಂದಿಗೆ ಕೊಡಬೇಕೆಂದು ಹೇಳುವ ಒಂದು ಪ್ರಶ್ನೆಯನ್ನು ಕೇಳಿದ್ದು, ಡಿ.ಸಿ

ಯವರ ಮೂಲಕ meeting ಅನ್ನು ಕೂಡ ಮಾಡಿದ್ದೇನೆ. ಅದಕ್ಕೆ ಜಾಗ ರೆಡಿ ಯಿದ್ದು, ಮಾನ್ಯ ಆರೋಗ್ಯ ಸಚಿವರು ಇದನ್ನು ಪ್ರಾಶಸ್ತ್ಯದಲ್ಲಿ ತೆಗೆದುಕೊಂಡು ಸೂರತ್ಕಲ್‌ಗೆ 100 ಬೆಡ್‌ಗಳ ಆಸ್ಪತ್ರೆಯನ್ನು ಕೊಡಬೇಕು. ಏಕೆಂದರೆ ಅಲ್ಲಿ ಬಹಳಷ್ಟು ಕಾರ್ಮಿಕರಿದ್ದಾರೆ.

ಶ್ರೀ ಯು.ಟಿ.ಖಾದರ್ : ಮಾನ್ಯ ಅಧ್ಯಕ್ಷರೆ, ಸೂರತ್ಕಲ್ ಪ್ರದೇಶ ಮಂಗಳೂರಿನಿಂದ 12 ಕಿ.ಮೀ. ದೂರದಲ್ಲಿದೆ. ಅದರ ಸುತ್ತಮುತ್ತ ಎರಡು ಲಕ್ಷದ ಹತ್ತು ಸಾವಿರ ಲಕ್ಷ ಜನಸಂಖ್ಯೆ ಇರಬೇಕು. ಈಗಾಗಲೇ ಎರಡು ಆಸ್ಪತ್ರೆ ಗಳು ಹತ್ತಿರವಿರುವ ಕಾರಣ ಇಲ್ಲಿಗೆ ಕೊಡುವುದಕ್ಕೆ ಸ್ವಲ್ಪ ಸಮಸ್ಯೆಯಾಗ ಬಹುದು ಮತ್ತು ಮಂಗಳೂರು ಕೂಡ ಹತ್ತಿರದಲ್ಲಿದೆ. ಕೊಡುವ ಪರಿಸ್ಥಿತಿ ಯಿದ್ದರೆ ಆದ್ಯತೆಯ ಮೇಲೆ ಪರಿಗಣಿಸುತ್ತೇವೆ.

ಶ್ರೀ ಬಿ.ಎ. ಮೋಹಿಯುದ್ದೀನ್ ಬಾವಾ : ಮಾನ್ಯ ಆರೋಗ್ಯ ಸಚಿವರೆ, ಸೂರತ್ಕಲ್ ಮಂಗಳೂರಿನಿಂದ 12 ಕಿ.ಮೀ. ದೂರದಲ್ಲಿಲ್ಲ, 19 ಕಿ.ಮೀ ದೂರ ದಲ್ಲಿದೆ. ಕಾಟಿಪಾಳ್ಯದಲ್ಲಿ ಮತ್ತೊಂದು ಆರೋಗ್ಯ ಕೇಂದ್ರವಿದೆಯೆಂದು ಹೇಳಿ ದ್ದೀರಿ. ಅದನ್ನು ಬೇಕಾದರೆ ಬಂದ್ ಮಾಡಿ ನಮಗೆ ಒಂದು ಆಸ್ಪತ್ರೆಯನ್ನು ಕೊಡಿ. ಏಕೆಂದರೆ ಕಾಟಿಪಾಳ್ಯ ಆಸ್ಪತ್ರೆಯಲ್ಲಿ ವೈದ್ಯರಿಲ್ಲ. ಅಲ್ಲಿ ಕೆಲಸವಾಗುತ್ತಿಲ್ಲ. ದಯವಿಟ್ಟು ಸೂರತ್ಕಲ್‌ಗೆ ಒಂದು ಆಸ್ಪತ್ರೆಯನ್ನು ಕೊಡಿ. ಇನ್ನೊಂದು ಕೇಂದ್ರದಲ್ಲಿರುವ ಆಸ್ಪತ್ರೆಯನ್ನು ಬೇಕಾದರೆ ರದ್ದು ಮಾಡಿ. ನಮ್ಮಲ್ಲಿ ಎರಡು ಲಕ್ಷ ಜನಸಂಖ್ಯೆ ಇದೆ.

ಶ್ರೀ ಯು.ಟಿ.ಖಾದರ್ : ಕಾನೂನಿನಡಿಯಲ್ಲಿ ಕ್ರಮ ಕೈಗೊಳ್ಳುತ್ತೇವೆ.

209; ತರೀಕೆರೆ ಆಸ್ಪತ್ರೆಯಲ್ಲಿ ಡಯಾಲಿಸಿಸ್ ಕೇಂದ್ರ ತೆರೆಯುವುದು

ಶ್ರೀ ಶ್ರೀನಿವಾಸ ಜಿ.ಎಚ್. (ತರೀಕೆರೆ)

ಅ) ಚಿಕ್ಕಮಗಳೂರು ಜಿಲ್ಲೆ ತರೀಕೆರೆ ಸರ್ಕಾರಿ ಆಸ್ಪತ್ರೆಯಲ್ಲಿ ಡಯಾಲಿಸಿಸ್ ಕೇಂದ್ರವನ್ನು ತೆರೆಯುವ ಪ್ರಸ್ತಾವನೆ ಸರ್ಕಾರದ ಮುಂದೆಯಿದೆಯೇ;